ಮಹಾಬಲನ ಮೇಲಿನ ಅನ್ಯಾಯದ ದಾಳಿಯನ್ನು ಹೇಗೆ ಸಹಿಸುವುದು? ಜೊತೆಗೆ ಸ್ವತಃ ವೀರಾದಿತ್ಯರ ಪಲ್ಲವ ರಾಜ್ಯದ ಪರ ಗೂಢಚಾರಿಕೆಯ ಮಹಾ ಪ್ರಮಾದವನ್ನು ಎಂದಿಗೂ ಸಹಿಸಲು ಸಾಧ್ಯವಿಲ್ಲ.'

'ಓಹೋ... ಗೂಢಚಾರಿಕೆ ಕೆಲಸ ಈ ವೀರಾದಿತ್ಯನಿದೋ...?' ಎಂಬ ವಿಷ್ಣುವರ್ಧನನ ಮಾತಿಗೆ, 'ಇಲ್ಲ ಪ್ರಭು, ನಾನಂಥ ಕೆಲಸ ಮಾಡಿಲ್ಲ. ನಾನು ಈ ಸಾಮ್ರಾಜ್ಯದ ಒಳಿತಿಕೋಸ್ಕರ ಹಗಲಿರುಳು ಶ್ರಮಿಸುತ್ತಿರುವವನು. ನಾನು ಈ ರಾಜ್ಯಕ್ಕೆ ದ್ರೋಹ ಬಗೆಯುವ ಕಾರ್ಯ ಮಾಡಿಲ್ಲ. ಮಹಾಬಲನೇ ಆ ಕೆಲಸ ಮಾಡಿದ್ದು' ಎಂದ ವೀರಾದಿತ್ಯನ ಮಾತಿಗೆ, ಮಹಾಬಲ ಕಣ್ಣೀರು ಹಾಕುತ್ತ 'ಇಲ್ಲ ಪ್ರಭುಗಳೇ, ನಾನು ಈ ಸಾಮ್ರಾಜ್ಯಕ್ಕೆ ದ್ರೋಹ ಬಗೆಯುವ ಕೆಲಸವನ್ನು ಮಾಡಿಲ್ಲ.'

ಪುಲಕೇಶಿ 'ಅದು ನಮಗೆ ಗೊತ್ತು ಮಹಾಬಲ. ಏನು ವೀರಾದಿತ್ಯ ನೀನು ಅಂತಹ ಕೃತ್ಯ ಮಾಡುತಿಲ್ಲವೋ..? ನೀನು ಚಾಲುಕ್ಯ ಸಾಮ್ರಾಜ್ಯಕ್ಕೆ ದ್ರೋಹ ಬಗೆಯುತ್ತಿರುವಿಯೆಂದು ನನಗೆ ಮಾಹಿತಿ ದೊರಕಿದಾಗ ವಿಷ್ಣುವಿನ ಆಪ್ತನಾಗಿ ಅಂತಹ ಕಾರ್ಯ ಮಾಡಲಾರನೆಂದು ನಂಬಿದ್ದೆ. ಜೊತೆಗೆ ಅದನ್ನು ಮಾಡಲು ಕಾರಣವೂ ಇಲ್ಲವೆಂದು ನಂಬಿದ್ದೆ"

"ಹೌದು ಪ್ರಭು, ತಮ್ಮ ನಂಬಿಕೆಗೆ ನಾನೆಂದೂ ದ್ರೋಹ ಬಗೆಯುವವನಲ್ಲ. ಈ ಸಾಮ್ರಾಜ್ಯದ ಸೇವೆಗೆ ಕಂಕಣಬದ್ಧನಾಗಿ ದುಡಿಯುತ್ತಿದ್ದೇನೆ. ವಾತಾಪಿಗೆ ಸ್ವಲ್ಪ ಕಂಟಕ ಬಂದರೂ ನನಗೆ ಸಹಿಸಲು ಸಾಧ್ಯವಿಲ್ಲ. ಸೇನಾಧಿಪತಿಯಾಗಿ ನನ್ನ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತಿದ್ದೇನೆ. ಆ ಸಾಮಾನ್ಯನ ಮಾತು ಕೇಳಬೇಡಿ ಪ್ರಭು'.

'ಅವನು ಸಾಮಾನ್ಯನಾದರೆ ನೀನೇಕೆ ಅವನ ಹತ್ತಿರ ನಿನ್ನ ಕೆಲಸಕ್ಕಾಗಿ ಹೋಗಿದ್ದೆ. ಕುದುರೆಗಳನ್ನು ಪಳಗಿಸುವುದರಲ್ಲಿ ಆತ ಅಸಾಮಾನ್ಯ. ನಿನ್ನಂತೆ ದ್ರೋಹ ಬಗೆಯುವವನಲ್ಲ. ಆದರೆ ನೀನು ಕಳೆದ ಹುಣ್ಣಿಮೆ ದಿನದ ಮಧ್ಯಾಹ್ನ ಮಹಾಕೂಟದ ಹತ್ತಿರದ ಆಲದಮರದ ಕೆಳಗೆ ಈ ಮಹಾಬಲನ ಮೇಲೆ ಹಲ್ಲೆ ಮಾಡಿದ್ದು, ಜೊತೆಗೆ ರಾಜದ್ರೋಹದ ಮಾತನ್ನು ಆಡಿದ್ದು ಸುಳ್ಳವೇ?'

'ಈತನ ಮೇಲೆ ಹಲ್ಲೆ ಮಾಡಿದ್ದು ನಿಜ ಪ್ರಭು. ಕಾರಣವನ್ನು ಈ ಸಭೆಯ ಮುಂದೆ ಈಗಾಗಲೇ ಹೇಳಿದ್ದೇನಲ್ಲ' ಎಂದ. ಆ ಮಾತಿಗೆ ಕೋಪಗೊಂಡ ಪುಲಕೇಶಿ 'ವೀರಾದಿತ್ಯ, ರಾಜದ್ರೋಹದ ಕೆಲಸ ಮಾಡುತ್ತಿರುವುದು ನೀನು. ಮಹಾಬಲನಲ್ಲ. ಏನೋ ಅರಿಯದ ಆತನ ಮೇಲೆ ನಿನ್ನ ಕೃತ್ಯದ ಆರೋಪವನ್ನು ಆತನ ಮೇಲೆ ಹೊರಿಸಿ ಹಲ್ಲೆ ಮಾಡಿರುವೆ. ಸೇನಾಧಿಪತಿಯಾಗಿ ಇಂತಹ ನೀಚ ಕೆಲಸ ಮಾಡುತ್ತಿರುವಿಯಲ್ಲ. ನಾಚಿಕೆಯಾಗಬೇಕು ನಿನಗೆ'.

'ಇಲ್ಲ ಪ್ರಭು, ನಾನಂಥ ಕೆಲಸ ಮಾಡಿಲ್ಲ. ಈ ಮಹಾಬಲ ತುಂಬಾ ಮೋಸಗಾರ. ಆತನೇ ವಿಶ್ವಾಸದ್ರೋಹ ಮಾಡುತ್ತಿರುವುದು.'

'ಹೌದೇ..? ಮತ್ತೇ ಅಂದು ಆಲದಮರದ ಕೆಳಗೆ ಈತನ ಮೇಲೆ ದಾಳಿ ವೇಳೆಯಲ್ಲಿ ಒಬ್ಬ ವಯಸ್ಸಾದ ಆ ವ್ಯಕ್ತಿಯ ಮುಂದೆ ನೀನು ಆಡಿದ ಮಾತು ಸುಳ್ಳೇ'?

' ನಾನು ಯಾವ ಮಾತು ಆಡಿಲ್ಲ ಪ್ರಭು', ಆ ಮಾತಿಗೆ ರವಿಕೀರ್ತಿಯೇ 'ಹಾಗಾದರೆ ನಿಮ್ಮ ಸ್ವಂತದ ಕುದುರೆಯನ್ನು ಪಳಗಿಸಲಿಲ್ಲವೆಂದು ಮಹಾಬಲನನ್ನು ಹೊಡೆಯುತ್ತಿರುವುದಾಗಿ, ಆ ಕಾರಣಕ್ಕೆ ನಿನ್ನ ರಾಜದ್ರೋಹದ ಕೃತ್ಯವನ್ನು ಆತನ ಮೇಲೆ ಹೊರೆಸಿ ಆತನನ್ನು ಗಲ್ಲಿಗೇರಿಸುವೆನೆಂದು ಆ ವ್ಯಕ್ತಿಯ ಮುಂದೆ ನೀವು ಹೇಳಲಿಲ್ಲವೇ..?'

'ಇಲ್ಲ ಮಹಾಮಂತ್ರಿಗಳೇ, ನಾನು ಆ ರೀತಿ ಮಾತನಾಡಿಲ್ಲ' ವೀರಾದಿತ್ಯನ ಮಾತಿನಲ್ಲಿ ಭಯ ಮೂಡಿದ್ದು ಸ್ಪಷ್ಟವಾಗಿ ಗೋಚರಿಸುತಿತ್ತು.

'ವೀರಾದಿತ್ಯರೆ, ಅನೃತ ಮಾತನಾಡಬೇಡಿ. ನೀವು ಸಾಮ್ರಾಜ್ಯದ ವಿರುದ್ಧ ಸಂಚು ಹೂಡಿದ್ದು ಈಗಾಗಲೇ ಗೊತ್ತಾಗಿದೆ. ಜೊತೆಗೆ ಪ್ರಭುಗಳೇ ಸ್ವತಃ ನಿಮ್ಮ ಕೃತ್ಯವನ್ನು ಕಂಡಿದ್ದಾರೆ ಜೊತೆಗೆ ನೀವು ಮಾತನಾಡಿದ್ದನ್ನು ಕೇಳಿದ್ದಾರೆ.'

'ಇಲ್ಲ ಮಹಾಮಂತ್ರಿಗಳೇ, ನಾನು ಸಂಚನ್ನು ಮಾಡಿಲ್ಲ. ಅಂತಹ ಯಾವುದೇ ಮಾತನ್ನೂ ಆಡಿಲ್ಲ. ಆ ಮುದುಕ ಯಾರೋ ನನಗೆ ಗೊತ್ತೇ ಇಲ್ಲ'.

'ನಿಮಗೆ ಗೊತ್ತು ಇರದೇ ಇರಬಹುದು. ಆದರೆ ಪ್ರಭುಗಳಿಗೆ ಎಲ್ಲವೂ ಗೊತ್ತು. ಯಾಕೆಂದರೆ ಅಂದು ವೃದ್ಧ ವ್ಯಕ್ತಿಯ ಮಾರುವೇಷದಲ್ಲಿ ಬಂದದ್ದು ಸ್ವತಃ ಪ್ರಭುಗಳೇ' ಎಂದಾಗ ವೀರಾದಿತ್ಯನ ಮುಖ ವಿವರ್ಣಗೊಂಡಿತು.

ನಿಜ, ಯಾವಾಗ ವೀರಾದಿತ್ಯನು ರಾಜದ್ರೋಹದಂತಹ ಗುರುತರ ಕೃತ್ಯ ಮಾಡುತ್ತಿದ್ದಾನೆಂದು ಗೂಢಚಾರರಿಂದ ಮಾಹಿತಿ ಬಂದಿತೋ ಅಂದಿನಿಂದಲೇ ಆತನ ಮೇಲೆ ಹದ್ದಿನ ಕಣ್ಣು ಇಡಲು ಸೂಚಿಸಲಾಗಿತ್ತು. ಅಲ್ಲದೇ ವಿಷಯ ಗಂಭೀರವಾದ್ದರಿಂದ ದೊರೆಗಳು ಸ್ವತಃ ತಾವೇ ಪರೀಕ್ಷಿಸಬೇಕೆಂದು ಮಾರುವೇಷದಲ್ಲಿ ಯಾರಿಗೂ ಕೂಡಾ ಮಾಹಿತಿ ನೀಡದೆ ಬೇರೆ ಬೇರೆ ಸ್ಥಳಕ್ಕೆ ಸಂಚಾರ ಕೈಗೊಂಡಿದ್ದರು. ಅನೇಕ ಗ್ರಾಮಗಳಿಗೆ ತೆರಳಿ ಅಲ್ಲಿಯ ಸ್ಥಳೀಕರಿಂದಲೂ ಮಾಹಿತಿ ಪಡೆದಿದ್ದರು. ಆ ಕಾರಣದಿಂದಲೇ ಅವರು ಅಂದು ಮಹಾಕೂಟಕ್ಕೆ ಹೋದಾಗ ವೀರಾದಿತ್ಯನ ನಾಟಕ ಬಯಲಾದದ್ದು.

'ಏನು ವೀರಾದಿತ್ಯರೆ, ಯಾರೋ ಮುದುಕನೆಂದು ಎಲ್ಲವನ್ನು ಸ್ವತಃ ಪ್ರಭುಗಳ ಮುಂದೆಯೇ ಅಂದು ಮಾತನಾಡಿದ್ದೀರಿ. ನಿಮ್ಮ ಕೃತ್ಯವನ್ನು ನೀವೇ ಹೇಳಿದ್ದಿರಿ. ಅದೂ ಸುಳ್ಳೆ..?' ರವಿಕೀರ್ತಿ ಕೇಳಿದಾಗ ವೀರಾದಿತ್ಯ ತನ್ನ ಮುಖವಾಡ ಕಳಚಿ ಬಿದ್ದದ್ದು ಕಂಡು ತನ್ನ ಮುಖವನ್ನು ಕೆಳಗೆ ಹಾಕಿಕೊಂಡು ನಿಂತನು.

ವಿಷ್ಣುವರ್ಧನನೇ 'ಛೀ ದೇಶದ್ರೋಹಿ, ನಿನ್ನನ್ನು ನಾನೂ ಅದೆಷ್ಟು ನಂಬಿದ್ದೆ. ನನ್ನ ಆಪ್ತರಲ್ಲಿ ಒಬ್ಬನೆಂದು ನೆಚ್ಚಿದ್ದೆ. ರಾಜದ್ರೋಹ ಕೃತ್ಯ ಎಸಗಿದ ನೀಚ ನೀನು. ಅಲ್ಲದೆ ನಿನ್ನ ಪಾಪದ ಕಾರ್ಯವನ್ನು ಆ ಅಮಾಯಕನ ಮೇಲೆ ಕಟ್ಟುತ್ತಿದ್ದೀಯ. ಅಣ್ಣಾಜಿ ಇವನಿಗೆ ಉಗ್ರ ದಂಡನೆ ಆಗಲೇಬೇಕು. ಅಂದಾಗಲೇ ಇಂಥ ರಾಜಕಂಟಕರಿಗೆ ಬುದ್ಧಿ ಬರುವುದು'.

'ನಿಜ ವಿಷ್ಣು, ಈಗ ಗೊತ್ತಾಯಿತಲ್ಲ. ನಿಜವಾದ ರಾಜದ್ರೋಹಿ ಯಾರೆಂಬುವುದು. ಚಾಲುಕ್ಯ ಸಾಮ್ರಾಜ್ಯದಲ್ಲಿ ಯಾರಿಗೂ ಅನ್ಯಾಯ ಆಗಬಾರದು. ಯಾವುದೇ ಒಬ್ಬ ನಿರಪರಾಧಿಗೆ ಶಿಕ್ಷೆ ಆಗಬಾರದೆಂಬುದೆ ಈ ನೆಲದ ನ್ಯಾಯ. ಈ ಕನ್ನಡ ಮಣ್ಣಿನ ಅನ್ನವನುಂಡು ರಾಜದ್ರೋಹದಂಥ ಹೇಯ ಕೃತ್ಯ ಮಾಡುವವರು ಯಾರೇ ಆಗಿರಲಿ ಅಂಥವರಿಗೆ ಕಠಿಣ ಶಿಕ್ಷೆ ಆಗಲೇಬೇಕು. ಅದು ಮಹಾರಾಜನೇ ಆಗಿರಲಿ, ಮಂತ್ರಿಯೇ ಆಗಿರಲಿ, ಕೊನೆಗೆ ಸಾಮ್ರಾಜ್ಯದ ಸಾಮಾನ್ಯ ವ್ಯಕ್ತಿಯೇ ಆಗಿರಲಿ ಶಿಕ್ಷೆಗೆ ಗುರಿಯಾಗಲೇಬೇಕು. ಆ ಕಾರಣಕ್ಕೆ ಈ ರಾಜದ್ರೋಹಿ ವೀರಾದಿತ್ಯನಿಗೆ ಮರಣದಂಡನೆಯೇ ಸರಿಯಾದ ಶಿಕ್ಷೆ' ಎಂದು ತನ್ನ ರಾಜಾಜ್ಞೆಯನ್ನು ಸಭೆಯ ಮುಂದೆ ಘೋಷಿಸಿದಾಗ ಆಗ ತುಂಬಿದ ಸಭೆಯಲ್ಲಿ 'ಹೌದು.. ಹೌದು... ಇಂತಹ ರಾಜದ್ರೋಹಿಗೆ ಅದೇ ಸರಿಯಾದ ದಂಡನೆ' ಎಂಬ ಎಲ್ಲರ ಧ್ವನಿಯ ನಡುವೆ ವೀರಾದಿತ್ಯನ 'ಬೇಡ ಪ್ರಭು ಬೇಡ... ಅಂಥ ದೊಡ್ಡ ಶಿಕ್ಷೆ ಬೇಡ' ಎಂಬ ಮಾತುಗಳು ಯಾರಿಗೂ ಕೇಳಿಸಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**

